## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೂರ್ವ) ವಲಯ
## ಶಿವಾಜಿನಗರ ವಿಭಾಗ, ವಸಂತನಗರ ಉಪವಿಭಾಗ

ದಿನಾಂಕ:05–01–2019 ಬೆಳಿಗ್ಗೆ 11.00 ಗಂಟೆಗೆ ಕರೆಯಲಾಗಿದ್ದ, ವಾರ್ಡ್–62, ರಾಮಸ್ವಾಮಿ ಪಾಳ್ಯ ವಾರ್ಡ್ ಸಮಿತಿಯ ಸಭೆಯ ನಡವಳಿಗಳು:–

| ಕ್ರಮ ಸಂಖ್ಯೆ | ಹೆಸರು | ಹುದ್ದೆ. |
|---|---|---|
| 1. | **ಶ್ರೀಮತಿ. ನೇತ್ರಾವತಿ** | ಅಧ್ಯಕ್ಷರು |
| 2. | ಶ್ರೀಮತಿ. ಪರ್ವಿನ್ ಖಾನಂ. | ಸದಸ್ಯರು |
| 3. | ಶ್ರೀ ಗುಣಶೇಖರ್ ಡಿ.ಜಿ.: | ಸದಸ್ಯರು |
| 4. | ಶ್ರೀ ನಾಗರಾಜ್. ಆರ್ | ಸದಸ್ಯರು |
| 5. | ಶ್ರೀ ಅರುಣ್ ಕುಮಾರ್. ಇ | ಸದಸ್ಯರು |
| 6. | ಶ್ರೀ. ಪುಟ್ಟರಾಮರಾಧ್ಯ | ಸದಸ್ಯರು |
| 7. | ಶ್ರೀ ನಾಗರಾಜ್. ಹೆಚ್ | ಸದಸ್ಯರು |
| 8. | ಶ್ರೀ ಸಿ.ಲಿಂಗಯ್ಯ, | ಕಾರ್ಯದರ್ಶಿ ಮತ್ತು ಸಂಚಾಲಕರು |
| 9 | ಶ್ರೀ ಆರ್ಮುಗಂ | ಕಂದಾಯ ಪರಿವೀಕ್ಷಕರು |
| 10 | ಶ್ರೀ. ಮಹೇಶ್ | ಕಂದಾಯ ವಸೂಲಿಗಾರರು |
| 11 | ಶ್ರೀಮತಿ ಸುಧಾಮಣಿ. ಜೆ. ಎನ್. | ಟೈಲರಿಂಗ್ ಟೀಚರ್ |
| 12 | ಶ್ರೀ ಪ್ರಶಾಂತ್ ನಾಯಕ್ | ಕಿ.ಆ.ಪರಿವೀಕ್ಷಕರು |
| 13 | ಶ್ರೀಮತಿ. ಅನುಸೂಯ ಕೆ. | ಆರೋಗ್ಯ ಕಾರ್ಯಕರ್ತೆ |
| 14 | ಶ್ರೀಮತಿ. ಜಯಮ್ಮ | ಆರೋಗ್ಯ ಕಾರ್ಯಕರ್ತೆ |

- ವಾರ್ಡ್ ಸಮಿತಿಯ ಸಭೆಯನ್ನು ಬೆಳಿಗ್ಗೆ.11.00 ಗಂಟೆಗೆ ಕರೆದಿದ್ದು, ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ಸದಸ್ಯರು ಮತ್ತು ಅಧಿಕಾರಿ/ ಸಿಬ್ಬಂದಿಯನ್ನು ಸಮಿತಿಯ ಸಂಚಾಲಕರು ಹಾಗೂ ಕಾರ್ಯದರ್ಶಿಗಳಾದ ಸಹಾಯಕ ಕಂದಾಯ ಅಧಿಕಾರಿ(ವಸಂತನಗರ) ಉಪವಿಭಾಗ ರವರು ಸಭೆಗೆ ಆಗಮಿಸಿದ ಎಲ್ಲರನ್ನೂ ಸ್ವಾಗತಿಸಿದರು, ಸಮಿತಿಯ ಅಧ್ಯಕ್ಷರಾದ ಶ್ರೀಮತಿ. ನೇತ್ರಾವತಿ ಕೃಷ್ಣೇಗೌಡ ರವರು ಸಭೆಗೆ ಸಂಬಂಧಪಟ್ಟ ಅಧಿಕಾರಿಗಳಾದ ಸಹಾಯಕ ಅಭಿಯಂತರರು, ವಾರ್ಡ್–62, ಸಹಾಯಕ ಅಭಿಯಂತರರು, ನೀರುಗಾಲುವೆ, ಬೀದಿ ದೀಪ ಹಾಗೂ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಗೈರುಹಾಜರಾದ್ದರಿಂದ ಸಭೆಯಲ್ಲಿ ವಿಷಾದ ವ್ಯಕ್ತಪಡಿಸಿದರು.
- ಸಭೆಗೆ ಗೈರುಹಾಜರಾದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. **ಕ್ರಮ: ಜಂಟಿ ಆಯುಕ್ತರು (ಪೂರ್ವ)/ಉಪ ಆಯುಕ್ತರು(ಪೂರ್ವ) ಮುಖ್ಯ ಅಭಿಯಂತರರು (ಪೂರ್ವ).**

ಪು.ತಿ.ನೋ,

- ವಾರ್ಡ್-62. ರಾಮಸ್ವಾಮಿ ಪಾಳ್ಯದ ಎ.ಕೆ. ಕಾಲೋನಿಯಲ್ಲಿ ಸಾರ್ವಜನಿಕ ಸುಲಭ ಶೌಚಾಲಯವಿದ್ದು, ಸಂಬಂಧಪಟ್ಟ ಗುತ್ತಿಗೆದಾರರು ಅದರ ಸ್ವಚ್ಛತೆಯನ್ನು ನಿರ್ವಹಿಸದೇ ಇರುವುದಾಗಿ ಸದಸ್ಯರು ತಿಳಿಸಿದರು. ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೂಡಲೇ ಪ್ರತಿದಿನ ಬ್ಲಿಚಿಂಗ್ ಪೌಡರ್ ನೀಡಿ ಸ್ವಚ್ಛತೆಯನ್ನು ಮಾಡಿಸುವಂತೆ ಸೂಚಿಸಲಾಯಿತು. **ಕ್ರಮ: ಆರೋಗ್ಯಾಧಿಕಾರಿ(ಪೂರ್ವ) ಆರೋಗ್ಯ ವೈದ್ಯಾಧಿಕಾರಿ (ಶಿವಾಜಿನಗರ)**
- ವಾರ್ಡಿನಲ್ಲಿ ಖಾಸಗೀ ಸ್ವತ್ತುಗಳು ಖಾಲಿ ನಿವೇಶನವಾಗಿದ್ದು, ಈ ಸ್ವತ್ತುಗಳಲ್ಲಿ ಗಿಡ-ಮರಗಳು ಹಾಗೂ ಕಸ ಸುರಿಯುವುದರಿಂದ ಸಾಂಕ್ರಾಮಿಕ ರೋಗಗಳು ಹರಡುವುದರಿಂದ ಅಕ್ಕ-ಪಕ್ಕದ ನಿವಾಸಿಗಳಿಗೆ ತೊಂದರೆಯಾಗಿರುವುದಾಗಿ ಸದಸ್ಯರು ತಿಳಿಸಿದರು. ಮಾನ್ಯ ಅಧ್ಯಕ್ಷರು ಕೂಡಲೇ ಖಾಲಿ ನಿವೇಶನಗಳ ಪಟ್ಟಿ ಮಾಡಿ, ಮಾಲೀಕರಿಗೆ ತಿಳುವಳಿಕೆ ಪತ್ರ ನೀಡುವಂತೆ ಸೂಚಿಸಿದರು. **ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಸಂತನಗರ) / ಕಂದಾಯ ಪರಿವೀಕ್ಷಕರು/ ಕಂದಾಯ ವಸೂಲಿಗಾರರು**
- ವಾರ್ಡಿನಲ್ಲಿ ತುರ್ತು ಕಾಮಗಾರಿಗಳ ಅಂದಾಜು ಪಟ್ಟಿಯನ್ನು ಮಾಡಿ ಸಭೆಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಲು ಸಂಬಂಧಪಟ್ಟ ಸಹಾಯಕ ಅಭಿಯಂತರರು, ವಾರ್ಡ್ -62 ರವರಿಗೆ ಸೂಚಿಸಲಾಯಿತು. **ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಸಂತನಗರ)/ ಸಹಾಯಕ ಅಭಿಯಂತರರು (ವಾರ್ಡ್-62)**

ಸಮಿತಿಯ ಸಂಚಾಲಕರು ಹಾಗೂ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಎಲ್ಲರಿಗೂ ವಂದನೆಗಳನ್ನು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ನೇತ್ರಾವತಿ ಕೃಷ್ಣೇಗೌಡ)
ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ
ಮಾನ್ಯ ನಗರ ಪಾಲಿಕೆ ಸದಸ್ಯರು

**ಪ್ರತಿಯನ್ನು:**

1. ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
2. ಮಾನ್ಯ ಉಪಮಹಾಪೌರರ ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸಲಾಗಿದೆ.
3. ಮಾನ್ಯ ಆಯುಕ್ತರು ರವರ ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸಲಾಗಿದೆ.
4. ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
5. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ.
6. ಉಪ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಕಳುಹಿಸಲಾಗಿದೆ.
7. ಮುಖ್ಯ ಅಭಿಯಂತರರು/ ಪೂರ್ವ/ ನೀರುಗಾಲುವೆ ರವರ ಅವಗಾಹನೆಗಾಗಿ ಕಳುಹಿಸಲಾಗಿದೆ.
8. ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ರವರ ಅವಗಾಹನೆಗಾಗಿ ಕಳುಹಿಸಲಾಗಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಸಂತನಗರ) /ವಿದ್ಯುತ್ (ಪೂರ್ವ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಕಲ್ಯಾಣಾಧಿಕಾರಿ (ಪೂರ್ವ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ, ಮಾಹಿತಿಯನ್ನು ಕೂಡಲೇ ಕಳುಹಿಸಲು ಸೂಚಿಸಿದೆ.
11. ಸಮಿತಿಯ ಎಲ್ಲಾ ಸದಸ್ಯರ ಅವಗಾಹನೆಗೆ ಕಳುಹಿಸಲಾಗಿದೆ.
12. ಕಾರ್ಯದರ್ಶಿ ಮತ್ತು ಸಂಚಾಲರು ಅವಗಾಹನೆಗಾಗಿ ಕಳುಹಿಸಿದೆ.
13. ಸಂಬಂಧಪಟ್ಟ ಅಧಿಕಾರಿ/ನೌಕರರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.